ದಿನಾಂಕ 13-10-2025 ರಂದು ಸಾಕ್ಷಿಯನ್ನು ಮರಳಿ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟಿಸವಾಲುಃ ಎದುರುದಾರರ ಪರ ಶ್ರೀ ಕೆ.ಎಸ್.ಹೆಚ್. ವಕೀಲರಿಂದ**

1) ನಾನು ಈ ಸಾಕ್ಷ್ಯವನ್ನು ಎಲ್ಲಾ ಅರ್ಜಿದಾರರ ಪರವಾಗಿ ನೀಡುತ್ತಿದ್ದೇನೆ. ನಾನು ಎಲ್ಲಾ ಅರ್ಜಿದಾರರಿಗೆ ಈ ವಿಚಾರಣೆಯಲ್ಲಿ ಪ್ರತಿನಿಧಿಸುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಈ ಮೊದಲು ಎದುರುದಾರ ಸಂಸ್ಥೆಯವರು ಪರಿಹಾರವನ್ನು ಪಾವತಿಸಿದ್ದಾರೆ ಎಂದರೆ, ನ್ಯಾಯಾಲಯದಲ್ಲಿ ಇರಬಹುದು. ಈ ಮೊದಲು ಪರಿಹಾರಕ್ಕೆ ಆದೇಶವಾದ ನಂತರ ನಾವು ಅದನ್ನು ಪ್ರಶ್ನಿಸಿಲ್ಲ ಎಂದರೆ ನಿಜ. 2007 ರಲ್ಲಿ ಈ ಕಾಮಗಾರಿಯ ಪ್ರಕಟಣೆಯಾಗಿ, 2008 ರಲ್ಲಿ ಕಾಮಗಾರಿ ನಡೆದಿತ್ತು ಎಂದರೆ ನಿಜ. ಈ ಮೊದಲು ನಮ್ಮ ಸ್ವತ್ತಿನ ಮೇಲಿನ ವಿದ್ಯುತ್ ದಾರಿಗಾಗಿ ಕಮಿಷನರ್ ರವರು ವರದಿ ಸಲ್ಲಿಸಿದ್ದರು ಎಂದರೆ ನಿಜ. ಆ ವರದಿಗೆ ನಾವು ಆಕ್ಷೇಪಿಸಿಲ್ಲ.

2) 2008 ರ ಸಾಲಿನಲ್ಲಿ ನಮ್ಮ ಜಮೀನಿನ ಸುತ್ತಮುತ್ತಲಿನ ಸ್ವತ್ತುಗಳು ಮಾರಾಟವಾಗಿದ್ದವು. ಆ ಕ್ರಯ ಪತ್ರಗಳನ್ನು ಹಾಜರುಪಡಿಸಿದೆಯಾ ಎಂದರೆ, ಆ ಕ್ರಯ ಪತ್ರಗಳು ಮಾರಾಟವಾದ ದರಕ್ಕೆ ನೊಂದಾಗಿರುವುದಿಲ್ಲ, ಆದ್ದರಿಂದ ಹಾಜರುಪಡಿಸಿಲ್ಲ. ಕ್ರಯ ಪತ್ರಗಳು ಮಾರಾಟವಾದ ದರಕ್ಕೆ ನೊಂದಾಗಿದೆ ಎಂದರೆ ಸರಿಯಲ್ಲ. ನಾನು ನಮ್ಮ ಆಸ್ತಿಗಳನ್ನು ಕನ್‌ವರ್ಟ ಮಾಡಿಲ್ಲ. ಕನ್‌ವರ್ಷನ್ ಆದ ಸ್ವತ್ತುಗಳು ಮತ್ತು ಆಗದ ಸ್ವತ್ತುಗಳ ನಡುವೆ ದರಗಳಲ್ಲಿ ಬದಲಾವಣೆ ಇರುತ್ತದೆ. ಕರೆಂಟ್ ದಾರಿಗಳಿಗಾಗಿ ಹಾಕಿರುವ ಜಾಗೆಯಲ್ಲಿ ಯಾವುದೇ ಬೇಸಾಯ ಮೊದಲು ಮಾಡಿರಲಿಲ್ಲ ಎಂದರೆ, ಮೊದಲು ಹಾಗೆ ಇತ್ತು, ಈಗಲೂ ಹಾಗೆ ಇದೆ.

3) ನಮ್ಮ ದಾವಾ ಸ್ವತ್ತಿನೊಂದಿಗೆ ನಿಶಾನೆ ಪಿ-11 ರಡಿಯಲ್ಲಿ ದರ ಅನ್ವಯ ಆಗುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ದಾವಾ ಸ್ವತ್ತುಗಳು ಸುತ್ತಮುತ್ತಲಿನಲ್ಲಿ ಪ್ರತಿ ಚದರ ಮೀಟರ್ ಗೆ 3 ಸಾವಿರ ರೂಪಾಯಿಗಳಷ್ಟು ದರ ಇಲ್ಲ ಎಂದರೆ ಸರಿಯಲ್ಲ. ಆ

ದರಕ್ಕೆ ಪೂರಕವಾದ ದಾಖಲೆಗಳನ್ನು ಹಾಜರುಪಡಿಸಿಲ್ಲ. ಎದುರುದಾರ ಸಂಸ್ಥೆಯವರು ನಮ್ಮ ಜಮೀನುಗಳಿಗೆ ಸರಿಯಾದ ಪರಿಹಾರನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಆದ್ದರಿಂದ ನಾವು ಹೆಚ್ಚಿನ ಪರಿಹಾರಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ನ್ಯಾಯಾಧೀಶರು
ಜಿಲ್ಲಾ ನ್ಯಾಯಾಲಯ, ಉಡುಪಿ